# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ.ಸಿ. ಸಂಖ್ಯೆ : 911/2023**

**ಚಾಸಾ : 3**

**ಪ್ರಾಸಾ : 3**

| | |
|---|---|
| **ಹೆಸರು** | ಃ ಹೆಚ್ ಸಿ ಚಂದ್ರು |
| **ತಂದೆಯ ಹೆಸರು** | ಃ ಲೇಟ್ ಚೆನ್ನಯ್ಯ |
| **ವಯಸ್ಸು** | ಃ 58 ವರ್ಷ |
| **ಉದ್ಯೋಗ** | ಃ ಸಬ್ ಇನ್ಸ್ ಪೆಕ್ಟರ್ , ವಿರಾಜಪೇಟೆ ವಲಯ, ವಿರಾಜಪೇಟೆ |
| **ವಾಸಸ್ಥಳ** | ಃ ವಿರಾಜಪೇಟೆ |

**ದಿನಾಂಕ ಃ 21-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ನಾನು ದಿನಾಂಕ 26-07-2022 ರಿಂದ 30-10-2022 ರವರೆಗೆ ವಿರಾಜಪೇಟೆ ಅಬಕಾರಿ ವಲಯದ, ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 30-12-2022 ರಂದು ನಾನು ಹಾಗೂ ನಮ್ಮ ಇಲಾಖೆಯ ಸಿಬ್ಬಂದಿಗಳಾದ ಚಾಸಾ4, 5 ಹಾಗೂ 9 ರವರು ಚಾಸಾ1 ರವರೊಂದಿಗೆ ವಿರಾಜಪೇಟೆ ನಗರದ ಚಿಕ್ಕಪೇಟೆ ಜಂಕ್ಷನ್ ಬಳಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ5 ರವರಿಗೆ ಆರೋಪಿಯು ವಿರಾಜಪೇಟೆಯ ಸುಣ್ಣದ ಬೀದಿ ಅಬ್ದುಲ್ ಕಲಾಂ ರಸ್ತೆಯಿಂದ ಎಫ್ ಎಂ ಸಿ ರಸ್ತೆಯ ಕಡೆಗೆ ಕೆಎ 02 ಇಜಡ್ 6865 ನೋಂದಣಿ ಸಂಖ್ಯೆಯ ಹೀರೋಹೊಂಡ ಸಿಡಿ 100 ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮಧ್ಯವನ್ನು ಸಾಗಾಟ ಮಾಡುತ್ತಿದ್ದಾರೆಂದು ಅವರಿಗೆ ಮಾಹಿತಿ ಬಂದಿದ್ದು, ಸದರಿ ಮಾಹಿತಿಯ ಆಧಾರದ ಮೇಲೆ ಚಾಸಾ5 ರವರು ಚಾಸಾ1 ರವರಿಗೆ ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇಲೆ ಚಾಸಾ1 ರವರು ಸದರಿ ಸ್ಥಳಕ್ಕೆ ನನ್ನನ್ನು, ನಮ್ಮ ಕಛೇರಿಯ ಸಿಬ್ಬಂದಿಗಳಾದ ಚಾಸಾ4, 5 ಹಾಗೂ 9 ರವರನ್ನು ಕರೆದುಕೊಂಡು ಹೋಗಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದು, ರಾತ್ರಿ ಸುಮಾರು 9.45 ಗಂಟೆಗೆ ಚಾಸಾ5 ರವರು ತಿಳಿಸಿರುವ ಮೇಲೆ ಹೇಳಿದ ಕೆಎ 02 ಇಜಡ್ 6865 ನೋಂದಣಿ ಸಂಖ್ಯೆಯ ಹೀರೋಹೊಂಡ ಸಿಡಿ 100 ದ್ವಿಚಕ್ರ ವಾಹನದಲ್ಲಿ ಆರೋಪಿಯು ಬಂದಿದ್ದು, ಸದರಿ ಬೈಕ್ ನ್ನು ತಡೆದು ನಿಲ್ಲಿಸಿ, ಆರೋಪಿಗೆ ನಾವು

This is a True Copy of the Court Records Online. Authenticated @ districts.ecourtsindia.com/cnr/KAKD520017042023/truecopy/order-3.pdf

www.ecourtsindia.com

ಬಂದಿರುವ ವಿಚಾರವನ್ನು ತಿಳಿಸಿ, ಅವರ ಹೆಸರು ಹಾಗೂ ವಿಳಾಸವನ್ನು ಕೇಳಲಾಗಿ ಅವರು ತನ್ನ ಹೆಸರು ಎ ಡಿ ಲೋಕೇಶ್ ತಂದೆ ಲೇಟ್ ದೇವಯ್ಯ, ಪ್ರಾಯ 46 ವರ್ಷ, ವಾಸ ಮಾರೊಂದೋಡು ಗ್ರಾಮ, ಚೆಯ್ಯಂಡಾಣೆ ಅಂಚೆ, ಮಡಿಕೇರಿ ತಾಲ್ಲೂಕು ಎಂಬುದಾಗಿ ತಿಳಿಸಿರುತ್ತಾರೆ.

ನಂತರ ಅದೇ ಸಮಯದಲ್ಲಿ ಅಲ್ಲಿ ಹೋಗುತ್ತಿದ್ದ ಚಾಸಾ2 ರವರನ್ನು ನಿಲ್ಲಿಸಿ, ಅವರಿಗೆ ದಾಳಿಯ ವಿಚಾರವನ್ನು ತಿಳಿಸಿ, ಮಹಜರಿನ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡು, ನೋಟಿಸ್ ನ್ನು ಜಾರಿ ಮಾಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ. ನಂತರ ನ್ಯಾಯಾಲಯದಿಂದ ಶೋಧನಾ ಸಮುಚ್ಚಿತ ವರದಿಯನ್ನು ಪಡೆದುಕೊಳ್ಳಲು ಸಮಯವಿಲ್ಲದಿರುವುದರಿಂದ, ಚಾಸಾ1 ರವರು ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ವರದಿಯನ್ನು ತಯಾರಿಸಿಕೊಂಡು ಪಂಚರಾದ ಚಾಸಾ2 ಹಾಗೂ ನಮ್ಮ ಕಛೇರಿ ಸಿಬ್ಬಂದಿಗಳ ಸಮಕ್ಷಮ ಸದರಿ ದ್ವಿಚಕ್ರ ವಾಹನವನ್ನು ಪರಿಶೀಲಿಸಿರುತ್ತೇವೆ. ಆ ರೀತಿ ಪರಿಶೀಲಿಸಿದಾಗ ಸದರಿ ಬೈಕ್ ನ ಪೆಟ್ರೋಲ್ ಟ್ಯಾಂಕ್ ನ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದ ಒಳಗೆ ರಟ್ಟಿನ ಬಾಕ್ಸ್ ಇದ್ದು, ಅದನ್ನು ತೆರೆದು ನೋಡಲಾಗಿ, ಅದರಲ್ಲಿ 90 ಎಂ ಎಲ್ ನ 96 ಒರಿಜಿನಲ್ ಚಾಯ್ಸ್ ಬ್ರಾಂಡಿಯ ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡು ಬಂದಿರುತ್ತದೆ.

ಆರೋಪಿಗೆ ಸದರಿ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಸಾಗಿಸಲು ಸರ್ಕಾರದ ಪರವಾನಗಿ ಇದೆಯೇ ಎಂದು ಕೇಳಲಾಗಿ ಆರೋಪಿಯು ಆ ರೀತಿಯ ಯಾವುದೇ ಪರವಾನಗಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಪಂಚರಾದ ಚಾಸಾ2 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಸದರಿ ಮಧ್ಯದ ಟೆಟ್ರಾ ಪ್ಯಾಕ್ ಗಳ ಪೈಕಿ 30 ಟೆಟ್ರಾ ಪ್ಯಾಕ್ ಗಳನ್ನು ಪ್ರತ್ಯೇಕವಾಗಿ ತೆಗೆದು, ಅವುಗಳನ್ನು ಬಿಳಿ ಬಟ್ಟೆಯಿಂದ ಪ್ರತ್ಯೇಕವಾಗಿ ಸುತ್ತಿ, ಹೊಲಿದು, ಸೀಲು ಮಾಡಿ, ಅವುಗಳಿಗೆ ಪಂಚರಾದ ಚಾಸಾ2 ಹಾಗೂ ಚಾಸಾ1 ರವರ ಸಹಿ ಇರುವ ಚೀಟಿಗಳನ್ನು ಅಂಟಿಸಿ, ಸದರಿ ಎಲ್ಲಾ ಮಧ್ಯದ ಟೆಟ್ರಾ ಪ್ಯಾಕೆಟ್ ಗಳು, ಅವುಗಳಿದ್ದ ಬಾಕ್ಸ್ ಹಾಗೂ ಬೈಕ್ ನ್ನು ಮಹಜರ ಕ್ರಮ ಜರುಗಿಸುವ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಜರನ್ನು ರಾತ್ರಿ 9.45 ರಿಂದ 10.45 ರವರೆಗೆ ವಿದ್ಯುತ್ ದೀಪದ ಸಹಾಯದಿಂದ ಚಾಸಾ1 ರವರ ಉಕ್ತಲೇಖನದ ಮೇರೆಗೆ ನಾನು ಬರೆದಿರುತ್ತೇನೆ. ಸದರಿ ಮಹಜರಿನ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೆವೆ. ನಂತರ ಆರೋಪಿಗೆ ಭಾ. ದಂ, ಪ್ರ. ಸಂ. ಕಲಂ 41 ರಡಿಯಲ್ಲಿ ನೋಟಿಸ್‌ನ್ನು ನೀಡಿ, ಅಲ್ಲಿಯೇ ಬಿಟ್ಟಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡ ಸ್ವತ್ತುಗಳೊಂದಿಗೆ ಕಛೇರಿಗೆ ಹಿಂತಿರುಗಿರುತ್ತೇವೆ. ನಂತರ

This is a True Copy of the Court Records Online. Authenticated @ districts.ecourtsindia.com/cnr/KAKD520017042023/truecopy/order-3.pdf

ಕಛೇರಿಯಲ್ಲಿ ಚಾಸಾ1 ರವರು ಆರೋಪಿಯ ವಿರುದ್ಧ ಮೊ ಸಂ. 38/2022-23 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.

ಸಾಕ್ಷಿಗೆ ನಿಪಿ3 ನ್ನು ತೋರಿಸಲಾಗಿ, ಸಾಕ್ಷಿಯು ಅದು ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ4 ಹಾಗೂ 5 ಫೋಟೋಗಳನ್ನು ಹಾಗೂ ನಿಪಿ6 ಸಿಡಿಯನ್ನು ತೋರಿಸಲಾಗಿ ಸಾಕ್ಷಿಯು ಅದು ನಿಪಿ3 ರಂತೆ ಮಹಜರ ಕ್ರಮ ಜರುಗಿಸುವಾಗ ತೆಗೆದ ಫೋಟೋ ಹಾಗೂ ಅದಕ್ಕೆ ಸಂಬಂಧಿಸಿದ ಸಿಡಿ ಎಂದು ಗುರುತಿಸುತ್ತಾರೆ. ನಂತರ ದಿನಾಂಕ 10-03-2023 ರಂದು ಚಾಸಾ1 ರವರ ಮೌಖಿಕ ಆದೇಶದ ಮೇರೆಗೆ ಮಾದರಿಗಾಗಿ ತೆಗೆದು 30 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ನಮ್ಮ ಸಿಬ್ಬಂದಿಯಾದ ಚಾಸಾ7 ರವರ ಮೂಲಕ ಬೆಂಗಳೂರಿನ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1 ಹಾಗೂ ಮು ಮಾ 2 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟಿ ಸವಾಲು ಃ ಶ್ರೀ. ಎ ಜಿ ಎಂ / ಶ್ರೀಮತಿ ಎಸ್ ಎಂ ಟಿ ಆರೋಪಿ ಪರ ವಕೀಲರಿಂದ ಃ</u>**

ನಾನು ಸದರಿ ದಿನದಂದು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಇಲಾಖೆಯವರಿಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ ಹಾಗೂ ಆರೋಪಿ ಯಾವುದೇ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮಹಜರು ಜರುಗಿಸಿದ ನಂತರ ಚಾಸಾ1 ರವರು ಕಛೇರಿಯಲ್ಲಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ನಾವು ಯಾವುದೇ ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಅಲ್ಲಿ ಆರೋಪಿ ಯಾವುದೇ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಸಾಗಾಟ ಮಾಡುತ್ತಿರಲಿಲ್ಲ ಹಾಗೂ ಅಲ್ಲಿ ನಾವು ಯಾವುದೇ ಮಹಜರ ಕ್ರಮ ಜರುಗಿಸಿ, ಆರೋಪಿ ವಶದಿಂದ ಯಾವುದೇ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ4 ಹಾಗೂ 5 ಫೋಟೋಗಳು ಈ ಪ್ರಕರಣಕ್ಕೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ 3 ಮಹಜರನ್ನು ಪ್ರಕರಣಕ್ಕೋಸ್ಕರ ಕಛೇರಿಯಲ್ಲೆ ಸೃಷ್ಟಿಸಿದ್ದು, ಅದಕ್ಕೆ ನಾನು, ನಮ್ಮ

This is a True Copy of the Court Records Online. Authenticated @ districts.ecourtsindia.com/cnr/KAKD520017042023/truecopy/order-3.pdf

ಸಿಬ್ಬಂದಿ ಹಾಗೂ ಪಂಚರಾದ ಚಾಸಾ2 ರವರು ಕಛೇರಿಯಲ್ಲೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮು ಮಾ 1 ರಂತಹ ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಸಾಮಾನ್ಯವಾಗಿ ಎಲ್ಲಾ ಮಧ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಯಾವುದೇ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಾವು ಹಾಗೂ ನಮ್ಮ ಮೇಲಾಧಿಕಾರಿಯ ಚಾಸಾ1 ರವರು ಸೇರಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿ, ಸದರಿ ಪ್ರಕರಣಕ್ಕೆ ಪೂರಕವಾಗಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ, ಮು ಮಾಲಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ

This is a True Copy of the Court Records Online. Authenticated @ districts.ecourtsindia.com/cnr/KAKD520017042023/truecopy/order-3.pdf